ಆ) ಇದ್ದಲ್ಲಿ ಈಗ ಯಾವ ಹಂತದಲ್ಲಿದೆ;

ಇ) ಅದರ ಸರ್ವೆ ಕಾರ್ಯವನ್ನು ಯಾವಾಗ ಪ್ರಾರಂಭಿಸಲಾಗುತ್ತದೆ; ಒಂದು ವೇಳೆ ಸರ್ವೆ ಕಾರ್ಯ ಪ್ರಾರಂಭಿಸಿದ್ದಲ್ಲಿ, ಈವರೆಗೆ ಸಾಧಿಸಿದ ಪ್ರಗತಿ ಏನು; (ವಿವರವನ್ನು ನೀಡುವುದು)?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು)

ಅ) ಮರೋಳ ಏತ ನೀರಾವರಿ ಯೋಜನೆಯನ್ನು ಸಮಗ್ರ ಹುನಗುಂದ ತಾಲ್ಲೂಕಿನ ಉಳಿದ ಭಾಗಕ್ಕೆ ವಿಸ್ತರಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಸದರಿ ಮರೋಳ ಏತ ನೀರಾವರಿ ಯೋಜನೆಯನ್ನು ಹುನಗುಂದ ತಾಲ್ಲೂಕಿನಾದ್ಯಂತ ವಿತ್ತರಿಸಲು ಹೆಚ್ಚುವರಿಯಾಗಿ 9 ಟಿಎಂಸಿ ಯ ನೀರಿನ ಅವಶ್ಯಕತೆ ಇದ್ದು, ಈ ನೀರನ್ನು ಸ್ಕೀಂ 'ಬಿ' ಅಡಿಯಲ್ಲಿ ಒದಗಿಸುವ ಪ್ರಸ್ತಾವನೆ ಇದೆ.

ಇ) ಯೋಜನೆಯನ್ನು ವಿಸ್ತರಿಸುವ ಬಗ್ಗೆ ಅವಶ್ಯವಿರುವ 9 ಟಿ.ಎಂ.ಸಿ. ನೀರು ಸ್ಕೀ 'ಬಿ' ಅಡಿಯಲ್ಲಿ ಸರ್ವೆ ಕಾರ್ಯವನ್ನು ಪ್ರಾರಂಭಿಸಲು ಕ್ರಮ ತೆಗೆದುಕೊಳ್ಳಲಾಗುವುದು.

542(641) : ಶ್ರೀ ಗಂಗಾಧರ್ ನಾಗೇಶ್ ಭಟ್ (ಕಾರವಾರ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಷ್ಟ್ರೀಯ ಹೆದ್ದಾರಿ 17ರ ಕಾರವಾರ ಬಳಿ ಕಾಳಿ ನದಿಗೆ ಸೇತುವೆ ನಿರ್ಮಿಸಿದ್ದು ಯಾವಾಗ ಮತ್ತು ಅದರ ಅಂದಾಜು ವೆಚ್ಚ ಎಷ್ಟು;

ಆ) ಸೇತುವೆಯ ಶುಲ್ಕ ಅಕರಣೆಯಿಂದ ಸರ್ಕಾರಕ್ಕೆ ಬರುವ ಆದಾಯ ಎಷ್ಟು;

ಇ) ಶುಲ್ಕ ಅಕರಣೆ ಯಾವಾಗ ನಿಲ್ಲಿಸಲಾಗುವುದು ಹಾಗೂ ಸ್ಥಳೀಯರಿಗೆ ಶುಲ್ಕ ವಿನಾಯಿತಿ ನೀಡುವ ವಿಚಾರ ಸರ್ಕಾರಕ್ಕೆ ಇದೆಯೆ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಕಾಳಿ ನದಿಗೆ ಅಡ್ಡಲಾಗಿ ಬೃಹತ್ ಸೇತುವೆಯನ್ನು 1983ನೇ ಇಸವಿಯಲ್ಲಿ ನಿರ್ಮಿಸಲಾಯಿತು ಹಾಗೂ ಇದಕ್ಕಾಗಿ 400 ಲಕ್ಷ ರೂ. ಗಳ ವೆಚ್ಚವಾಗಿರುತ್ತದೆ.

ಆ) ಸೇತುವೆಯ ಶುಲ್ಕ ವಸೂಲಾತಿಯಿಂದ ಜೂನ್ 2004ರವರೆಗೆ ಕೇಂದ್ರ ಸರ್ಕಾರಕ್ಕೆ 513 ಲಕ್ಷ ರೂ.ಗಳು ಸಂದಾಯವಾಗಿರುತ್ತದೆ. (ಪ್ರತಿ ವಾರ ರೂ.87,500 ಶುಲ್ಕ ಆಕರಣೆ ಇರುತ್ತದೆ).

ಇ) ಸೇತುವೆ ಮೇಲೆ ಶುಲ್ಕ ವಸೂಲಾತಿಯನ್ನು ಕೇಂದ್ರ ಭೂಸಾರಿಗೆ ಮಂತ್ರಾಲಯದ 1978ರ ಅಧಿಸೂಚನೆಯಂತೆ, ಸೇತುವೆ ನಿರ್ಮಾಣ ಪೂರ್ಣ

ವೆಚ್ಚ, ನಿರ್ವಹಣೆ, ದುರಸ್ತಿ ವೆಚ್ಚ ಹಾಗೂ ಇದರ ಮೇಲಿನ ವರ್ಷಾವಾರು ಬಡ್ಡಿ ಇತ್ಯಾದಿ ವಸೂಲಾಗುವವರೆಗೆ ಮುಂದುವರೆಸಲಾಗುವುದು. ಹಾಗೂ ಈ ಅಧಿಸೂಚನೆಯಂತೆ ಸ್ಥಳೀಯರಿಗೆ ಶುಲ್ಕ ವಿನಾಯಿತಿ ಇರುವುದಿಲ್ಲ.

543(733) : ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಔರಾದ್ ತಾಲ್ಲೂಕಿನಲ್ಲಿ ಈಗ ಕಾರ್ಯನಿರ್ವಹಿಸುತ್ತಿರುವ 33 ಕೆ.ವಿ. ಮತ್ತು 110 ಕೆ.ವಿ. ಠಾಣೆಗಳ ಸಂಖ್ಯೆ ಎಷ್ಟು;

ಆ) ಈ-ತಾಲ್ಲೂಕಿನಲ್ಲಿ ವಿದ್ಯುತ್ ತೊಂದರೆಯನ್ನು ತಪ್ಪಿಸಲು ಯಾವ ಯಾವ ಸ್ಥಳಗಳಲ್ಲಿ ಹೊಸ ವಿದ್ಯುತ್ ಠಾಣೆ ಮತ್ತು ಉಪ ಠಾಣೆಗಳನ್ನು ಸ್ಥಾಪಿಸುವ ಬಗ್ಗೆ ಪ್ರಸ್ತಾವನೆ ಸರ್ಕಾರದ ಮುಂದೆ ಇದೆ;

ಇ) ಇವುಗಳ ಸಾಮರ್ಥ್ಯವೆಷ್ಟು;

ಈ) ಎಷ್ಟು ವಿದ್ಯುತ್ ಠಾಣೆಗಳ ಸ್ಥಾಪನಾಕಾರ್ಯ ಪ್ರಗತಿಯಲ್ಲಿದೆ (ಗ್ರಾಮವಾರು ವಿವರಗಳನ್ನು ಒದಗಿಸುವುದು);

ಉ) ತಾಲ್ಲೂಕಿನಲ್ಲಿ ವಿದ್ಯುತ್ ಸರಬರಾಜಿನಲ್ಲಿ ಉಂಟಾಗುತ್ತಿರುವ ವ್ಯತ್ಯಯವನ್ನು ತಪ್ಪಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಔರಾದ್ ತಾಲ್ಲೂಕಿನಲ್ಲಿ ಹಾಲಿ ಕಾರ್ಯನಿರ್ವಹಿಸುತ್ತಿರುವ 33 ಕೆ.ವಿ. ವಿದ್ಯುತ್ ಉಪ ಕೇಂದ್ರಗಳ ಸಂಖ್ಯೆ–3. ಈ ತಾಲ್ಲೂಕಿನಲ್ಲಿ ಪ್ರಸ್ತುತ ಯಾವುದೇ 110 ಕೆ.ವಿ. ವಿದ್ಯುತ್ ಕೇಂದ್ರವು ಇರುವುದಿಲ್ಲ.

ಆ) ಆ ಮತ್ತು ಇ

ಔರಾದ್ ತಾಲ್ಲೂಕಿನಲ್ಲಿ ಹೊಸ ವಿದ್ಯುತ್ ಉಪ ಕೇಂದ್ರಗಳನ್ನು ಸ್ಥಾಪಿಸುವ ಮತ್ತು ಹಾಲಿ ಇರುವ ಉಪ ಕೇಂದ್ರವನ್ನು ಉನ್ನತೀಕರಣಗೊಳಿಸುವ ಪ್ರಸ್ತಾವನೆಗಳು ಇದ್ದು. ಅವುಗಳ ವಿವರಗಳು ಈ ಕೆಳಕಂಡಂತಿದೆ.

ಕ್ರಮ ಸಂಖ್ಯೆ	ಸ್ಥಳ	ಸಾಮರ್ಥ್ಯ
1.	ಸಂತಪುರದಲ್ಲಿ ಹಾಲಿ ಇರುವ 33 ಕೆ.ವಿ. ವಿದ್ಯುತ್ ಉಪ ಕೇಂದ್ರವನ್ನು 110 ಕೆ.ವಿ.ಗೆ ಉನ್ನತೀಕರಣಗೊಳಿಸುವುದು.	10 ಎಂ.ವಿ.ಎ. 110x11 ಕೆ.ವಿ. ಮತ್ತು 1x20 ಎಂ.ವಿ.ಎ. 110/33ರರ ಕೆ.ವಿ.
2.	ಲಾಧ	2x10 ಎಂ.ವಿ.ಎ 110/11 ಕೆ.ವಿ.
3.	ಖೇರ್ಡಾ (ಬಿ)	2x5 ಎಂ.ವಿ.ಎ. 33/11ಕೆ.ವಿ.

ಈ) ಈ ಪೈಕಿ, ಸಂತಪುರದಲ್ಲಿ ಹಾಲಿ ಇರುವ 33 ಕೆ.ವಿ. ವಿದ್ಯುತ್ ಉಪ ಕೇಂದ್ರವನ್ನು 110 ಕೆ.ವಿ. ಉಪ ಕೇಂದ್ರವನ್ನಾಗಿ ಉನ್ನತೀಕರಣಗೊಳಿಸುವ ಕಾರ್ಯವು ಪ್ರಗತಿಯಲ್ಲಿದೆ.